ಸಮಾಜ ಕಲ್ಯಾಣ ಸಲಹಾ ಮಂಡಲಿಯ ೩೧ನೇ ವಾರ್ಷಿಕ ಪ್ರಗತಿಯ ಪಥದಲ್ಲಿ

೭೨. **ಶ್ರೀಮತಿ ಶಕುಂತಲಾ ತುಕಾರಾಮ ಚೌಗಲೆ (ಚಿಕ್ಕೋಡಿ).**—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

(ಅ) ಕರ್ನಾಟಕದಲ್ಲಿರುವ ಸಮಾಜ ಕಲ್ಯಾಣ ಸಲಹಾ ಮಂಡಳಿಯು ಕಳೆದ ಮೂರು ದಶಕಗಳಿಂದ ಸೇವೆ ಸಲ್ಲಿಸುತ್ತಿರುವುದು ನಿಜವೇ ?

(ಆ) ಹಾಗಿದ್ದಲ್ಲಿ ಮಂಡಳಿಯ ಕಾರ್ಯಕ್ರಮಗಳ ಪ್ರಗತಿ ಮತ್ತು ಅದರ ಪ್ರಯೋಜನ ಪಡೆಯುತ್ತಿರುವವರ ಸಂಖ್ಯೆ ಎಷ್ಟು ?

(ಇ) ಬೆಂಗಳೂರು, ತುಮಕೂರು, ಕೋಲಾರ, ಮೈಸೂರು ಸ್ವಲ್ಪ ಮಟ್ಟಿಗೆ ಚಿತ್ರದುರ್ಗ ಈ ಜಿಲ್ಲೆಗಳನ್ನು ಬಿಟ್ಟರೆ ಉಳಿದ ೧೪ ಜಿಲ್ಲೆಗಳ ಜನರು ಮಂಡಳಿಯಿಂದ ಪಡೆಯುತ್ತಿರುವ ಲಾಭ ಅತ್ಯಲ್ಪವಾಗಿದ್ದು ಮಂಡಳಿಯು ತನ್ನ ಕಾರ್ಯಕ್ರಮ ಪ್ರಚಾರವನ್ನು ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಈ) ಪ್ರತಿಯೊಂದು ಜಿಲ್ಲೆಯಲ್ಲಿ ನಿರ್ದೇಶಕರು ಸಮಾಜ ಕಲ್ಯಾಣ ಸಲಹಾ ಮಂಡಳಿಯ ಕಾರ್ಯಕ್ರಮದ ಕಡೆಗೆ ಗಮನ ಹರಿಸಿ ಎಲ್ಲಾ ಭಾಗದ ಮಹಿಳೆಯರು ಇದರ ಫಲಾನುಭವಿಗಳಾಗಲು ಸರಕಾರದವರು ಯಾವ ಕ್ರಮವನ್ನು ಕೈಗೊಂಡಿದ್ದಾರೆ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

(ಅ) ಹೌದು.

(ಆ) ಮಂಡಳಿಯು ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ.—
ಸಂಕ್ಷಿಪ್ತ ಶೈಕ್ಷಣಿಕ ವರ್ಗಗಳು.
ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳು.
ಮಕ್ಕಳಿಗೆ ರಜಾ ದಿನಗಳ ಶಿಬಿರ,
ವೃತ್ತಿ ಶಿಕ್ಷಣ, ಶಿಶು ಪಾಲನಾ ಕೇಂದ್ರಗಳು.
ಗ್ರಾಮೀಣ ಮಹಿಳೆಯರಿಗೆ ಸಾರ್ವಜನಿಕ ಸಹಕಾರ, ಮುಂದಾಳತ್ವದ ಪ್ರಚೋದನಾ ಶಿಬಿರ ಇತ್ಯಾದಿ.
ಬಾಲವಾಡಿಗಳು.
ಮಂಡಳಿಯು ಈಗ ೯೨೫ ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನ ನೀಡುತ್ತಿದ್ದು ಇದರಿಂದ ೪೬೫೪೪ ಜನರು ಪ್ರಯೋಜನ ಪಡೆಯುತ್ತಿದ್ದಾರೆ. ಇದಲ್ಲದೆ ಬೆಂಗಳೂರು ಜಿಲ್ಲೆಯ ಆನೇಕಲ್ ತಾಲ್ಲೂಕಿನಲ್ಲಿ ಮಂಡಳಿಯು ಸ್ವತಃ ೧೪ ಬಾಲವಾಡಿಗಳನ್ನು ೯೦೦ ಮಕ್ಕಳು ಮತ್ತು ೫೦೦ ಮಹಿಳೆಯರಿಗೆ ಪ್ರಯೋಜನ ಪಡೆಯುವಂತೆ ನಡೆಸುತ್ತಿದೆ.

(ಇ) ಇಲ್ಲ.

(ಈ) ಮಂಡಳಿಯು ಸ್ವತಂತ್ರ ಸಂಸ್ಥೆಯಾಗಿದ್ದು, ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರ ಆಡಳಿತದ ಅಧೀನದಲ್ಲಿ ಬರುವುದಿಲ್ಲ. ಆದ್ದರಿಂದ ಅದರ ಕಾರ್ಯಕ್ರಮಗಳನ್ನು ಇಲಾಖಾ ಅಧಿಕಾರಿಗಳಿಂದ ಉಸ್ತುವಾರಿ ಮಾಡಲಾಗುವುದಿಲ್ಲ.

ಶ್ರೀಮತಿ ಶಕುಂತಲ ತುಕಾರಾಮ್ ಚೌಗುಲೆ.— ಕಳೆದ ೩೦ ವರ್ಷಗಳಿಂದ ಈ ಸಮಾಜ ಕಲ್ಯಾಣ ಸಲಹಾ ಮಂಡಲಿಯು ನಮ್ಮ ರಾಜ್ಯದಲ್ಲಿ ಕೆಲಸ ಮಾಡಿಕೊಂಡು ಬಂದಿದೆ. ಈ ಸಲಹಾ ಮಂಡಲಿಯ ೩೧ನೇ ವಾರ್ಷಿಕ ಸಭೆಯಲ್ಲಿ ಈ ಮಂಡಲಿಯ ಅಧ್ಯಕ್ಷರು ಭಾಷಣ ಮಾಡುವಾಗ ಈ ಮಂಡಲಿಯ ಕಾರ್ಯಕ್ರಮಗಳ ವಿಚಾರ ಶಾಸಕರಿಗೆ ಮತ್ತು ಮಂತ್ರಿಗಳಿಗೆ ಸರಿಯಾಗಿ ಗೊತ್ತಿಲ್ಲ ಎಂದು ಆಪಾದನೆ ಮಾಡಿದ್ದಾರೆ. ಇದಕ್ಕೆ ಕಾರಣವೇನೆಂದರೆ, ಈ ಮಂಡಲಿಯ ಕಾರ್ಯಕ್ರಮಗಳು ಈಗ ನಾಲ್ಕೈದು ಜಿಲ್ಲೆಗಳಲ್ಲಿ ಮಾತ್ರ ನಡೆಯುತ್ತಿದ್ದು ಇನ್ನುಳಿದ ೧೪ ಜಿಲ್ಲೆಗಳಲ್ಲಿ ಯಾವ ಕೆಲಸವೂ ಆಗುತ್ತಿಲ್ಲ. ಇದಕ್ಕೆ ಕಾರಣವೇನು ? ಇಲ್ಲಿ ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಸಿಕ್ಕಿಲ್ಲ. ನನ್ನ ಎರಡನೆಯ ಪ್ರಶ್ನೆಗೆ ಉತ್ತರವಾಗಿ

'ಇಲ್ಲ' ಎಂದು ಹೇಳಿದ್ದೀರಿ. ಈ ಸಮಾಜ ಕಲ್ಯಾಣ ಸಲಹಾ ಮಂಡಲಿಗೆ ಹಣ ಎಲ್ಲಿಂದ ಬರುತ್ತದೆ ? ಬಂದಂಥ ಹಣವನ್ನು ಕೇವಲ ೫ ಜಿಲ್ಲೆಗಳಲ್ಲಿ ಮಾತ್ರ ಖರ್ಚು ಮಾಡಲು ಕಾರಣವೇನು? ಈ ಮಂಡಲಿಯು ಒಂದು ಸ್ವತಂತ್ರ ಸಂಸ್ಥೆಯಾಗಿದೆ ಎಂದು ಹೇಳಿದ್ದೀರಿ, ಇದು ತನ್ನ ೩೧ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಒಂದು ದೊಡ್ಡ ಸಮಾರಂಭವನ್ನು ಏರ್ಪಡಿಸಿ ಸಾಕಷ್ಟು ಹಣವನ್ನು ಖರ್ಚು ಮಾಡಿದೆ. ಈ ಮಂಡಲಿಗೆ ಕೇಂದ್ರ ಸರ್ಕಾರದವರು ಕೊಡುವ ಹಣ ಎಷ್ಟು ? ಮತ್ತು ರಾಜ್ಯಸರ್ಕಾರದವರು ಕೊಡುವ ಹಣ ಎಷ್ಟು ? ಈ ಮಂಡಲಿಗೆ ರಾಜ್ಯ ಸರ್ಕಾರದವರು ಹಣ ಕೊಡದಿದ್ದರೆ, ನಮ್ಮ ರಾಜ್ಯದವರು ಇದರ ಅಧ್ಯಕ್ಷರಾಗಿ ಏತಕ್ಕೆ ಇರಬೇಕು ?

ಶ್ರೀ ವಿ. ಎಲ್. ಪಾಟೀಲ್. — ಈ ಮಂಡಲಿಯು ಸ್ವತಂತ್ರ ಸಂಸ್ಥೆಯಾಗಿದೆ. ಇದಕ್ಕೆ ಹಣ ಕೇಂದ್ರದಿಂದ ಬರುತ್ತದೆ. ಈ ಹಣ ಖರ್ಚು ಮಾಡುವ ಬಗ್ಗೆ ಆ ಮಂಡಲಿಯವರೇ ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀಮತಿ ಶಕುಂತಲ ತುಕಾರಾಮ್ ಚೌಗುಲೆ. — ಈ ಮಂಡಲಿಗೆ ಕೇಂದ್ರದಿಂದ ಬರುವಂತಹ ಹಣವನ್ನು ಸಮ್ಮ ರಾಜ್ಯದ ಎಲ್ಲ ಜಿಲ್ಲೆಗಳಿಗೂ ಖರ್ಚು ಮಾಡದೆ ಕೇವಲ ೫ ಜಿಲ್ಲೆಗಳಲ್ಲಿ ಮಾತ್ರ ಖರ್ಚು ಮಾಡಲು ಕಾರಣವೇನು ?

ಶ್ರೀ ವಿ. ಎಲ್. ಪಾಟೀಲ್. —ಇದಕ್ಕೆ ಉತ್ತರ ಕೊಡುವ ಅವಶ್ಯಕತೆ ಇಲ್ಲ.

ಶ್ರೀಮತಿ ಶಕುಂತಲ ತುಕಾರಾಮ್ ಚೌಗಲೆ. —ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರ ಆಡಳಿತದ ಅಧೀನದಲ್ಲಿ ಈ ಮುಂಡಲಿಯು ಬರುವುದಿಲ್ಲವೆಂದು ಹೇಳಿದ್ದೀರಿ. ಆದರೆ ಇಲ್ಲಿ ಕೆಲಸ ಮಾಡುವ ಸಿಬ್ಬಂದಿಗಾಗಿ ಸರ್ಕಾರದವರು ಶೇಕಡಾ ೫೦ರಷ್ಟು ಹಣ ಖರ್ಚು ಮಾಡುತ್ತಿರುವುದರಿಂದ, ಈ ಮಂಡಲಿಯು ಕೆಲಸಕಾರ್ಯಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಜವಾಬ್ದಾರಿ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ್ದು ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಇದಕ್ಕೆ ನನಗೆ ಮಾನ್ಯ ಮಂತ್ರಿಗಳಿಂದ ಸರಿಯಾದ ಉತ್ತರ ಬೇಕು ?

ಶ್ರೀ ವಿ. ಎಲ್. ಪಾಟೀಲ್. — ಈ ಮಂಡಲಿಯು ಸ್ವತಂತ್ರ ಸಂಸ್ಥೆಯಾಗಿದೆ.

ಶ್ರೀಮತಿ ಶಕುಂತಲ ತುಕಾರಾಮ್ ಚೌಗುಲೆ. — ಇದು ಸ್ವತಂತ್ರ ಸಂಸ್ಥೆಯಾಗಿದ್ದರೂ ಸಹ ಅಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗೆ ರಾಜ್ಯಸರ್ಕಾರ ಹಣ ಕೊಡುತ್ತಿಲ್ಲವೇ ?

ಶ್ರೀ ವಿ. ಎಲ್. ಪಾಟೀಲ್. —ಆ ಮಂಡಳಿಯು ಇನ್ನಿತರ ಕೆಲಸಗಳಿಗೆ ಬೇಕಾಗುವಂತಹ ಹಣವನ್ನು ಕೇಂದ್ರಸರ್ಕಾರ ಕೊಡುತ್ತಿದೆ.

ಶ್ರೀ ಜಿ. ಎಂ. ಕಾನಡೆ. —ಮಾನ್ಯ ಮಂತ್ರಿಗಳು ಏನು ಹೇಳುತ್ತಿದ್ದಾರೆಂಬುದು ನಮಗೆ ಅರ್ಥವಾಗುತ್ತಿಲ್ಲ.

ಉಪಾಧ್ಯಕ್ಷರು. —ಆದರೆ ಪ್ರಶ್ನೆ ಕೇಳಿದವರಿಗೆ ಇದು ಅರ್ಥವಾಗಿದೆ.

ಶ್ರೀ ವಿ. ಎಲ್. ಪಾಟೀಲ್. —ಇದಕ್ಕೆ ಹಣ ಬರುವುದು ಕೇಂದ್ರಸರ್ಕಾರದಿಂದ. ಇದು ಸ್ವತಂತ್ರ ಸಂಸ್ಥೆಯಾಗಿದೆ.

ಶ್ರೀ ಯು. ಭೂಪತಿ. —ಮಾನ್ಯ ಮಂತ್ರಿಗಳ ಉತ್ತರ ಪ್ರಶ್ನೆ ಕೇಳಿದವರಿಗೂ ಸಹ ಅರ್ಥವಾಗಲಿಲ್ಲ ಇನ್ನು ನಮಗೆ ಹೇಗೆ ಅರ್ಥವಾಗಬೇಕು.

ಶ್ರೀ ವಿ. ಎಲ್. ಪಾಟೀಲ್. —ಈ ಮಂಡಲಿಯಲ್ಲಿ ಕೆಲಸ ಮಾಡುವ ಸಿಬ್ಬಂದಿ ಸಲುವಾಗಿ ಮತ್ತು ಇಲ್ಲಿನ ಅಡ್ಮಿನಿಸ್ಟ್ರೇಷನ್ ಸಲುವಾಗಿ ರಾಜ್ಯಸರ್ಕಾರದಿಂದ ೩.೫೦ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ. ಅದೇ ರೀತಿ ಈ ಮಂಡಲಿಗೆ ಕೇಂದ್ರಸರ್ಕಾರದಿಂದ ೮೪ ಲಕ್ಷ ರೂಪಾಯಿಗಳು ಬರುತ್ತದೆ. ಈ ಹಣವನ್ನು ಈ ಮಂಡಲಿಯು ಕೆಲವೊಂದು ಕಾರ್ಯಕ್ರಮಗಳನ್ನು ಜಾರಿಗೆ ತರಲು ಖರ್ಚು ಮಾಡುತ್ತದೆ.

ಶ್ರೀ ರಾಜವರ್ಧನ್. —ಮಾನ್ಯ ಅಧ್ಯಕ್ಷರೇ, ಬಿಸನೆಸ್ ಅಡ್ವೈಜರಿ ಕಮಿಟಿಯಲ್ಲಿ ಪ್ರಶ್ನೋತ್ತರ ಕಾಲಕ್ಕೆ ಒಂದು ಗಂಟೆ ಎಂದು ನಿಗದಿ ಮಾಡಿದ್ದಾರೆ. ಆದ್ದರಿಂದ ಈಗ ಮತ್ತೆ ಸಮಯವನ್ನು ಮುಂದುವರಿಸುತ್ತೀರಾ ಹೇಗೆ ?

ಒಬ್ಬ ಮಾನ್ಯ ಸದಸ್ಯರು.—ಕೆಲವು ಪ್ರಶ್ನೆಗಳಿಗೆ ಅರ್ಧ ಗಂಟೆಯ ಸಮಯ ಕೊಟ್ಟು, ಇನ್ನುಳಿದ ಪ್ರಶ್ನೆಗಳನ್ನು ತೆಗೆದುಕೊಳ್ಳದಿದ್ದರೆ ಹೇಗೆ ? ಇನ್ನುಳಿದ ಪ್ರಶ್ನೆಗಳನ್ನು ಸಹ ತೆಗೆದುಕೊಂಡು ಒಂದೊಂದು ಕ್ಲಾರಿಫಿಕೇಷನ್ ಕೇಳಲು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು —ಹನ್ನೆರಡೂವರೆ ಗಂಟೆಯವರೆಗೆ ಪ್ರಶ್ನೋತ್ತರಗಳನ್ನು ಮಾಡೋಣ.

ಶ್ರೀ ಬಿ. ಎಸ್ ಯಡಿಯೂರಪ್ಪ.—ಅದು ತಮ್ಮ ಕೈಯಲ್ಲಿದೆ ಸ್ವಾಮಿ.

ಉಪಾಧ್ಯಕ್ಷರು —ಪ್ರಶ್ನೋತ್ತರ ವೇಳೆಯನ್ನು ಒಂದು ಗಂಟೆಗಿಂತ ಮುಂದೆ ತೆಗೆದುಕೊಂಡು ಹೋಗಬೇಕಾದರೆ ಸದನ ಒಪ್ಪಿಗೆ ಕೊಟ್ಟರೆ ಮಾಡಬಹುದು. ಅದು ಬಿಟ್ಟು ನಾವೇ ಸ್ವೇಚ್ಛೆಯಿಂದ ಮಾಡುವುದು ಕೆಟ್ಟ ಸಂಪ್ರದಾಯವಾಗುತ್ತದೆ. ಸಭೆ ಒಪ್ಪಿಗೆ ಕೊಟ್ಟರೆ ಹನ್ನೆರಡು ಗಂಟೆವರೆಗೆ ಮುಂದುವರೆಸೋಣ. ಶ್ರೀ ರೇವಣಸಿದ್ದಯ್ಯನವರೇ ನೀವು ಕೇಳಿ.

ಬಳ್ಳಾರಿ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ಚಟುವಟಿಕೆಗಳು

೩೦೪. ಶ್ರೀ ಬಿ ಎಂ. ರೇವಣ್ಣಸಿದ್ದಯ್ಯ (ಶಿರಗುಪ್ಪ).—ಮಾನ್ಯ ರಾಜ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

(ಅ) ಬಳ್ಳಾರಿ ಜಿಲ್ಲೆಯಲ್ಲಿ ೧೯೪೪–೪೫ನೇ ಸಾಲಿನಲ್ಲಿ ಅರಣ್ಯ ಖಾತೆಗೆ ಸರ್ಕಾರದವರು ಮಾಡಿರುವ ತಾಲೂಕುವಾರು ಖರ್ಚೆಷ್ಟು ?

(ಆ) ಆ ಪೈಕಿ ತಾಲೂಕುವಾರು ಸಿಬ್ಬಂದಿಯವರಿಗೆ ಆಗಿರುವ ಖರ್ಚೆಷ್ಟು ?

(ಇ) ಆ ಪೈಕಿ ತಾಲೂಕುವಾರು ಗಿಡ ನೆಡುವುದಕ್ಕಾಗಿ ಮಾಡಿರುವ ಖರ್ಚೆಷ್ಟು ?

(ಈ) ೧೯೪೪–೪೫ರಲ್ಲಿ ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಗಿಡ ನೆಡಲಾಗಿದೆ. (ತಾಲೂಕುವಾರು ವಿವರಗಳನ್ನು ಒದಗಿಸುವುದು).

(ಉ) ಎಷ್ಟು ಮೈಲು ರಸ್ತೆಯ ಅಕ್ಕಪಕ್ಕದಲ್ಲಿ ಗಿಡ ನೆಡಲಾಗಿದೆ ?

ಶ್ರೀ ಬಿ. ವಿ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ೪೪–೪೫ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ತಾಲೂಕುವಾರು ಖರ್ಚಾದ ವೆಚ್ಚ ಈ ರೀತಿ ಇದೆ.—

			ರೂ. ಲಕ್ಷದಲ್ಲಿ
೧	ಹರಪನಹಳ್ಳಿ ತಾಲ್ಲೂಕು	...	೨೨,೮೭,೯೪೪–೦೦
೨	ಸೊಂಡೂರು ತಾಲ್ಲೂಕು	...	೧೦,೩೧,೩೬೪–೦೦
೩	ಹಡಗಲಿ ತಾಲ್ಲೂಕು	...	೭,೪೪,೦೩೭–೦೦
೪	ಕೂಡ್ಲಿಗಿ ತಾಲ್ಲೂಕು	...	೧೦,೮೯,೫೭೨–೦೦
೫	ಹೊಸಪೇಟೆ ತಾಲ್ಲೂಕು	...	೮,೯೦,೩೨೭–೦೦
೬	ಬಳ್ಳಾರಿ ತಾಲ್ಲೂಕು	...	೧೫,೯೪,೬೩೪–೦೦
೭	ಶಿರಗುಪ್ಪ ತಾಲ್ಲೂಕು	...	೩,೫೩,೮೭೯–೦೦
೮	ಹಗರಿಬೊಮ್ಮನಹಳ್ಳಿ ತಾಲ್ಲೂಕು	...	೫,೬೭,೮೦೯–೦೦

(ಆ) ೪೪–೪೫ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸಿಬ್ಬಂದಿಗಾಗಿ ಖರ್ಚಾಗಿರುವ ತಾಲೂಕುವಾರು ವಿವರವು ಈ ರೀತಿ ಇದೆ.—

೧	ಹರಪನಹಳ್ಳಿ ತಾಲ್ಲೂಕು	...	೩,೫೭ ೩೭೧–೦೦
೨	ಸೊಂಡೂರು ತಾಲ್ಲೂಕು	...	೨,೪೩ ೬೦೯–೦೦
೩	ಹಡಗಲಿ ತಾಲ್ಲೂಕು	...	೩೯,೬೪೨–೦೦